ಮುಂದೆ ಬಂದಳು. ಎಲ್ಲಿತ್ತೋ ಶಕ್ತಿ. ಎಲ್ಲಿಂದ ಬಂದಿತೋ ಬುದ್ಧಿ... ಬಾಗಿಲನ್ನು ಇನ್ನೇನು ಮುಚ್ಚಬೇಕು ಎನ್ನುವ ಸಮಯದಲ್ಲಿ ಆ ಮುದುಕನನ್ನು ನೂಕಿ ಹೊರ ಹಾರಿದ. ಹಾರುವಾಗ, ಆ ಮುದುಕನ ಬೆಂಕಿಯುಗುಳುವ ಕೈಗಳು ಅವನ ಮೊಣಕಾಲನ್ನು ಹಿಡಿಯುವ ಪ್ರಯತ್ನ ಮಾಡಿದವು... ಕೊಸರಿಕೊಂಡು ಹೊರ ಹಾರಿದ ಗಣಪತಿ.

ಒಂದೇ ಕ್ಷಣ... ಆ ವ್ಯಾನ್ ಮಾಯ... ಅಲ್ಲಿ ಏನೂ ನಡೆದೇ ಇಲ್ಲವೇನೋ ಎಂಬಂತೆ ತಂಪು ವಾತಾವರಣ! ಅವನಿಗೆ ಇಡೀ ಪ್ರಪಂಚವೇ ಗಿರಿಗಿರಿ ತಿರುಗಿದಂತೆ ಆಯಿತು. ಎಲ್ಲಿಯೋ ಒಂದು ಭಾರವಾದ ಕಲ್ಲೊಂದು ತಲೆಯಮೇಲೆ ಬಿದ್ದಂತೆ ಭಾಸವಾಗಿ ಅಲ್ಲಿಯೇ ಕುಸಿದ.

ಗಣಪತಿಯನ್ನು ಹುಡುಕುತ್ತಾ ಬಂದ ಕಾನ್‌ಸ್ಟೆಬಲ್‌ಗೆ ಯಾವ ಸುಳಿವೂ ಸಿಗದೇ ಸುಸ್ತಾಗಿ ಅಲ್ಲಿದ್ದ ಕಟ್ಟೆಯಮೇಲೆ ಕುಳಿತಿದ್ದ.

'ಎಲ್ಲಿಹೋದರು? ಅವರು ಇಲ್ಲಿ ಬಂದಿದ್ದರು ಎನ್ನುವ ಯಾವ ಸುಳಿವೂ ಇಲ್ಲ, ಬಹುಶಃ ಹೆದರಿ ಬರಲೇ ಇಲ್ಲವೇನೋ' ಎಂದುಕೊಂಡು ಅಲ್ಲಿಂದ ಎದ್ದ. ಯಾರೋ ಬೆನ್ನು ತಟ್ಟಿದಂತೆ ಭಾಸವಾಯಿತು. ಯಾರೋ ಹಳ್ಳಿಯವನು ಇರಬೇಕೆಂದು ತಿರುಗಿದ. ಅಲ್ಲಿ ಕಂಡವನು ಇನ್‌ಸ್ಪೆಕ್ಟರ್ ಗಣಪತಿ.

ಅವನ ಇಡೀ ಮುಖ ತೀವ್ರವಾದ ಶಾಖಕ್ಕೆ ಗುರಿಯಾದಂತೆ ಕಪ್ಪಗಾಗಿತ್ತು. ತಲೆ ಕೂದಲು ಮುಕ್ಕಾಲು ಭಾಗ ಸುಟ್ಟು ಅಲ್ಲಲ್ಲಿ ತಲೆಯ ಬೋಡು ಕಾಣಿಸುತ್ತಿತ್ತು. ಹಾಕಿದ ಬಟ್ಟೆಗಳು ಅಲ್ಲಲ್ಲಿ ಸುಟ್ಟಿದ್ದವು. ಮಂಡಿಯಿಂದ ಕೆಳಗಡೆ ಒಂದು ಕಾಲಿನ ಚರ್ಮ ಸಂಪೂರ್ಣ ಸುಟ್ಟು, ಮಾಂಸಖಂಡಗಳು, ಮೂಳೆ ಕಾಣುತ್ತಿದ್ದು, ಮಂಡಿಚಿಪ್ಪಿಗೆ ಆ ಕಾಲು ನೇತಾಡುತ್ತಿದೆಯೇನೋ ಅನ್ನುವಂತೆ ಭಾಸವಾಗುತ್ತಿತ್ತು. ಕಾನ್‌ಸ್ಟೆಬಲ್ ಭಯದಿಂದ ಎದ್ದು ಸಲ್ಯೂಟ್ ಮಾಡಿದ. ಗಣಪತಿ ಅವನನ್ನು ಗುರುತು ಹಿಡಿದಂತೆ ಕಾಣಲಿಲ್ಲ.

"ಸರ್, ಏನಾಯಿತು? ಯಾರು ಮಾಡಿದ್ದು? ಏನು ನೋಡಿದಿರಿ?" ಎಂದು ಕೂಗಿದ. ಅದ್ಯಾವುದರ ಪರಿವೆಯೇ ಇಲ್ಲದೇ ಗಣಪತಿ, "ಸಿಗರೇಟ್ ಪ್ಲೀಸ್... ಸಿಗರೇಟ್ ಪ್ಲೀಸ್..." ಎಂದು ಗೋಗರೆಯತೊಡಗಿದ.

**ವಾಸುದೇವ ಮೂರ್ತಿ ಪಿ.**

ಹುಟ್ಟಿದ ಊರು ಶಿವಮೊಗ್ಗ. ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ವೃತ್ತಿ. ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ.